ಮೈಸೂರ್ ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾಚೆ ಡಿಕ್ರಿ ದೇಣೇದಾರ ಮೈಸೂರು ಮಂಡಿ ಮೊಹಲ್ಲಾದಲ್ಲಿ ಟರ್ಕ್ ಪೋಲೀಸ್ ನೌಕರೀಲಿಯಿರುವ ಗುಲಾಂಹುಸೇ್

ವಿಷಯದಲ್ಲಿ—

ಸ್ಯ 1895—96ನೇ ಇಸವಿ ದಿವಾಳಿ ಕೇಸ್ ನಂಬರು 374.

ಹುಕುಂ,

ಮೇಲ್ಕಂಡ ಗುಲಾಂ ಹುಸೇ್ ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಈ ಕೋರ್ಟು ರೂಬರೂ ಅರ್ಜಿದಾರನಾದ ಗುಲಾಂ ಹುಸೇ್ ಖುದ್ದುಹಾಜರು ಮತ್ತು ಸದರೀಯವನ ಲೇಣೇದಾರರಾದ ಯಿವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತ್ ನೋಟಿಸು ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂದರೆ—1ನೇ ಗೋವಿಂದಜಟ್ಟೆಪ್ಪ 2ನೇ ಮೈಸೂರು ಸರ್ವಜನವರ್ದ್ಧನೀ ಬ್ಯಾಂಕ್ ಯೇಜಂಟರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಗುಲಾಂ ಹುಸೇ್ ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಮಲ್ಲಿ ಕಂಡ ಯಾವಸಾಲಕ್ಕೂ ಸ್ವತ್ತರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನು ನಿಖಾಲಸ್ ಮಾಡಲಾಗಿರುತ್ತೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1896ನೇ ಇಸವಿ ಜೂ್ 17ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಸೊಲಿಗೆ.	ಯಾವಾಗ ದೇಣೆ ಗಿಂಟುಪಡ್ಡ	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ಮೈಸೂರು ಲಷ್ಕರ್ ಮೊಹಲ್ಲಾದಲ್ಲಿರುವ ಗೋವಿಂದಜಟ್ಟೆಪ್ಪ ..	29—0—0		ಡಿಕ್ರಿ ಬಾಬತು	
2	ಮೈಸೂರು ಸರ್ವಜನವರ್ದ್ಧನೀ ಬ್ಯಾಂಕ್ ಯೇಜಂಟರು ..	11—0—0		ಡಿಟೋ	
		40—0—0			

ಆರ್. ಎಸ್. ಸುಬ್ರಾಯಐಯ್ಯರ್,
ಸಬ್ ಜಡ್ಜ್.

ಮೈಸೂರ್ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಕಂದಾಯದ ಬಾಕಿದಾರರಾದ ಜೋಡಿ ದೊಡ್ಡಸೋವನಹಳ್ಳಿ ಜೋಡಿದಾರ್ ತಮ್ಮಯ್ಯ ವಗೈರೆ 7 ಜನಗಳಿಂದ ಬರಬೇಕಾದ ಜಮಿರ್ಾ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ಕೃಷ್ಣರಾಜಪೇಟೆ ತಾಲ್ಲೂಕು ಕಚೇರೀಲಿ 1896ನೇ ಇಸವಿ ಜುಲೈ 20ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

ಹರಾಜು ಆ ದಿವಸ ದಿವಿ 12 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895—96ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಪೀಲ್ ಮೇರಿಗೆ 308—15—10 ರೂಪಾಯಿ ಆಗಿರುತ್ತೆ.